ಆಮಂತ್ರಿಸಿ ಸಸಿಹಕ್ಲಿನ ಕೆರೆದಂಡೆಯಲ್ಲಿ ವನಭೋಜನದ ಸಂಭ್ರಮವೋ ಸಂಭ್ರಮ!

ಕೃಷಿಯಲ್ಲೂ ಶೇಷಪ್ಪ ಎತ್ತಿದ ಕೈ. ಸಸಿಹಕ್ಲು ಸರಕಲಲ್ಲಿದ್ದ ಮುಂಡುಗ, ವಾಟೆಹಿಂಡ್ಲು, ಗಿಡಪೊದೆಗಳನ್ನು ಸವರಿಸಿದ. ಬಿದರ ಮೆಳೆ ಕಡಿದು, ಒಣಗಿದ ಬೊಡ್ಡೆ ಮತ್ತೆ ಚಿಗುರೊಡೆಯದಂತೆ ಬೆಂಕಿಯಿಟ್ಟು ಸುಡಿಸಿದ. ಬದಿ ಧರೆ ಜರಿಸಿ ನಾಲ್ಕೆಕರೆ ಜಾಗ ಬಯಲಾಗಿಸಿ ಸಮತಟ್ಟು ಮಾಡಿಸಿದ. ಧರೆ ಬದಿ, ದಿಡಗಿಹಳ್ಳ, ನಡುವೆ ಹೆಗ್ಗಪ್ಪು, ಪಟದ ಆಚೆಈಚೆ ಬದಿ ಉದ್ದಾನುದ್ದಕ್ಕೂ ಹಗ್ಗ ಕಟ್ಟಿ, ಕಪ್ಪು ತೆಗೆಸಿದ. ಎಕರೆಗೆ ನಾನೂರರಂತೆ ಅಡಿಕೆ ಸಸಿ ಸಾಲಾಗಿ ನೆಟ್ಟು, ಅದಕ್ಕೆ ಎಳೆ ಹಾಗೂ ಇಳಿ ಬಿಸಿಲು ಬೀಳದಂತೆ ಸೊಪ್ಪಿನ ತುಂಡು ಮರೆ ಮಾಡಿ, ದೀರ್ಘಾವಧಿ ನೆರಳು, ತಂಪಿಗಾಗಿ ಬಾಳೇಕಂದು ನೆಡೆಸಿದ. ಬಿದಿರಹಿಂಡ್ಲು ಹಾಗೂ ಸವರಿದ್ದ ಇನ್ನಿತರ ಗಿಡ ಮಟ್ಟುಗಳ ರಾಶಿಗೆ ಬೆಂಕಿಯಿಟ್ಟು ಸುಡುಗರಿ ಕಟ್ಟಿಸಿದ. ಕಾಡಕೋಣ, ಹಂದಿ, ಮೊಲ ಲೂಟಿ, ಉಪಟಳ ಮಾಡದಂತೆ ಮುಳ್ಳಿನೊಡ್ಡು ಬೇಲಿ ಮಾಡಿಸಿದ. ಬೇಸಾಯ ಮಾಡುವಾಗ, ಹಟ್ಟಿಗೊಬ್ಬರದ ಜೊತೆ ಸುಡುಗರಿ ಬೆರೆಸಿ ಸಸಿ ಬುಡಕ್ಕೆ ಎರಡೆರಡು ಹೆಡಗೆ ಹಾಕಿಸಿ, ಮೇಲೆ ಮೂರುಮೂರು ಬುಟ್ಟಿ ಮಣ್ಣು ಚೆಲ್ಲಿಸಿದ. ನೋಡುನೋಡುತ್ತಿದ್ದಂತೆ ಸಸಿತೋಟ, ದಷ್ಟ ಪುಷ್ಟವಾಗಿ ಬೆಳೆದು, ಹಸಿರು ಹೆಡೆಗಳಿಂದ ಕಂಗೊಳಿಸುತ್ತಾ, ಹೊಡೆಯಲ್ಲಿ ಹೊಂಬಾಳೆ ಒಡೆದು, ಸಿಂಗಾರವರಳಿ. ಗೊಂಚಲು ಗೊಂಚಲು ಅಡಿಕೆ ಕಾಯಿ ಹರಳುಗಟ್ಟಿ, ಎಳೆಸಸಿಯ ಗೊನೆ ಹಿಡಿಗೆ, ಕಂಡವರ ಕಣ್ಣು ಸೆಳೆದವು.

ಎಂಟುಹತ್ತು ವರ್ಷ ಕಾಲ, ಮಕ್ಕಳನ್ನು ಕಾಪಾಡುವಂತೆ, ಕಣ್ಣಲ್ಲಿ ಕಣ್ಣಿಟ್ಟು ಅಡಿಕೆಮರಗಳನ್ನು, ಹಗಲು ರಾತ್ರೆ ಬೆವರಿಳಿಸಿ ಬೆಳೆಸಿದ ಶೇಷಪ್ಪ. ಮಳೆಗಾಲದಲ್ಲಿ ಕೊನೆಗೆ ಕೊಳೆ ರೋಗ ತಾಗದಂತೆ, ಕೊಟ್ಟೆಮಣೆ ಜಾರಿಸುತ್ತಾ, ಮಳೆಗೆ ಪಾಚಿ ಕಟ್ಟಿದ ಅಡಿಕೆ ಮರವೇರಿ, ಹಾಳೇಕೊಟ್ಟೆ ಕಟ್ಟುತ್ತಿದ್ದ. ಕಾಲಕ್ರಮೇಣ ಚಾಲ್ತಿಗೆ ಬಂದ ಸಿಲೆಂಡರ್ ತಂದು ಅದಕ್ಕೆ, ಮೈಲುತುತ್ತದ ನೀರು, ಸುಣ್ಣ, ಕೇಶನ್ ಮಿಶ್ರಣ ತುಂಬಿ, ಪಂಪ್ ಹೊಡೆದು, ಬೆನ್ನಿಗೇರಿಸಿಕೊಂಡು ಔಷಧ ಸ್ಪ್ರೇ ಮಾಡಿ ಹೊಸತನದ ಹರಿಕಾರನಾದ. ಹಾಗೇ ಮೊಟ್ಟಮೊದಲ ಬಾರಿಗೆ ಗಟಾರ್ ಮಿಶನ್ ಬಳಸಿ ಕ್ರಾಂತಿಗೆ ನಾಂದಿ ಹಾಡಿದ.

ದೀಪಾವಳಿ ಮಲೆನಾಡಿಗರಿಗೆ 'ಅಡಿಕೆಗದ್ದೆ' ಕೊಯ್ಲಿನ ಸಡಗರ ಉಲ್ಲಾಸ ಬೆಡಗು!

ಎಲ್ಲರ ಅಡಿಕೆಕೊಯ್ಲಿನಂತೆ ಶೇಷಪ್ಪನದಲ್ಲವೇ ಅಲ್ಲ, ಅವನದಕ್ಕೆ ಅವನದೇ ಯಾದ ಹಲವಾರು ವೈಶಿಷ್ಟ್ಯಗಳುಂಟು. ಸಪಸಪೂರ, ಉದ್ದುದ್ದ ಚೂಪು ಚೂಪುಕಾಯಿ ಸಸಿಹಕ್ಲು ಮಣ್ಣಿನ ಗುಣವಿಶೇಷ. ಸುಲಿದ ಅಡಿಕೆ ಸುಲಿ ಬೇಳೆ ಬೇಯಸಲು ಹಂಡೆ ತುಂಬುವ ಮುನ್ನ, ಚೊಗರು ತಯಾರಿರ ಬೇಕು. ಅಡಿಕೆಗೆ ಬಣ್ಣ, ಬೆಲೆ, ಹಿರಿಮೆ ಬರುವುದು ಈ ಚೊಗರಿನ ಹದದಿಂದಲೇ! ನೇರಳೆತೆಪ್ಪೆ, ಬಾಳೇಮೂತಿ, ಜೋನಿಬೆಲ್ಲ, ಕಡ್ಲೇಯೆಣ್ಣೆ ಬೆರೆಸಿ ಕುದಿಸಿ, ಹದಗೊಳಿಸಿದ ಪಾಕವೇ ಚೊಗರು. ಈ ಚೊಗರು ತಯಾರಿಕೆಯಲ್ಲೂ ಅವನದೇ ಆದ ಹದವುಂಟು. ಚೊಗರಲ್ಲಿ ಕುದಿವ ಅಡಿಕೆಹಂಡೆಗೆ ಅಡಿಕೆ ದಬ್ಬೆದಸಿಗೆ ಹಾಕಿ ಎತ್ತಿದರೆ, ಚೊಗರು ಜೋನಿ ಬೆಲ್ಲದಂತೆ, ದಾರದೆಳೆ ಕಡಿಯದೇ ಹಾರಬೇಕು. ಆಗ ಅಡಿಕೆ ಬೆಂದಿತೆಂದೇ ಲೆಕ್ಕ! ಬೆಂದ ಅಡಿಕೆ, ಚಪ್ಪರದ ತಟ್ಟಿಗಳಲ್ಲಿ ಹರಡಿ, ಆರೇಳು ಬಿಸಿಲು ಒಣಗಿಸಿದರೆ ಅಡಿಕೆ ಮಾರುಕಟ್ಟೆಗೆ ಸಿದ್ಧ!

ಮಾರುಕಟ್ಟೆಗೆ ಕಳುಹಿಸುವ ಮುನ್ನ ಹಲವಾರು ರೀತಿರಿವಾಜುಗಳು. ಅಡಿಕೆ ತೂಕ ಮಾಡಿ ಮೂಟೆ ಕಟ್ಟಬೇಕು. ತೂಕ ಮಾಡುವಾಗ ಸಿದ್ಧವಾದ ಅಡಿಕೆ ರಾಶಿ ಮಾಡಿ ಪೂಜೆ ಮಾಡಿ, ತಕ್ಕಡಿಯಲ್ಲಿ ತೂಗಬೇಕು. ಎಡ ತಕ್ಕಡಿಯಲ್ಲಿ ಧಡಿಯ/ಮಣದ ತೂಕದ ಕಲ್ಲಿಟ್ಟು, ಬಲತಕ್ಕಡಿಯಲ್ಲಿ ತೂಗುವ ಅಡಿಕೆ ಪೇರಿಸಬೇಕು. ತೂಕ ಮಾಡುವವರು, ಪೇರಿಸುವವರಿಬ್ಬರೂ ತಲೆಗೆ ಪೇಟ ಕಟ್ಟಿಕೊಂಡಿರಬೇಕು! ಪ್ರತಿ ಆರು ತೂಕವಾದ ಕೂಡಲೇ, ಬಲ ತಕ್ಕಡಿ ಎಡಕ್ಕೂ, ಎಡ ತಕ್ಕಡಿಯನ್ನು, ಬಲಕ್ಕೂ ಅದಲುಬದಲು ಮಾಡಬೇಕು. ಆರರ ನಂತರ ಏಳು ಎನ್ನುವ ಹಾಗಿಲ್ಲ, ಮತ್ತೆ ಹೆಚ್ಚಲಿ.. ಮತ್ತೆ ಹೆಚ್ಚಲೆನ್ನಬೇಕು. ಹಾಗೆ ಹತ್ತರ ನಂತರ ಹನ್ನೊಂದೆನ್ನುವ ಹಾಗಿಲ್ಲ, ಹತ್ತು ಮತ್ತೊಂದು.. ಹತ್ತು ಮತ್ತೊಂದೆನ್ನಬೇಕು. ಗಟ್ಟಿಯಾಗಿ ಕಿರುಚದೇ ಮೆಲು ದನಿಯಲ್ಲಿ ರಾಗವಾಗೆಳೆದು ಹೇಳಬೇಕು. ಈ ಸಂಪ್ರದಾಯಗಳನ್ನು ಬಹಳ ನಿಷ್ಠೆಯಿಂದ